**ದಿನಾಂಕ:27.10.2023 ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರೆದ ಪಾಟೀ ಸವಾಲು: ಶ್ರೀ ಆರ್.ಎಸ್.ಎಂ., ಪ್ರತಿವಾದಿ ಪರ ವಕೀಲರಿಂದ**

17. ನಾನು ನನ್ನ ಹಿಂದಿನ ಪಾಟೀ ಸವಾಲಿನಲ್ಲಿ ನನ್ನ ತಂದೆಯ ಹೆಬ್ಬೆಟ್ಟಿನ ಸಹಿಗಳುಳ್ಳ ದಾಖಲೆಗಳು ಇದ್ದು, ಅವುಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸುತ್ತೇನೆ ಎಂದು ಹೇಳಿದ್ದು, ಸದರಿ ದಾಖಲೆಗಳನ್ನು ನಾನು ಈ ದಿನ ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ. ಮೊಹಮ್ಮದ್ ಸಾಬ್ ತಂದೆ ಗರೀಬ್ ಸಾಬ್ ಎಂದರೆ ನನ್ನ ಅಣ್ಣ ಎಂದರೆ ಸರಿ. ಹಯಾತ್ ಸಾಬ್ ಬಿನ್ ಗರೀಬ್ ಸಾಬ್ ಎಂದರೆ ನನ್ನ ಇನ್ನೊಬ್ಬ ಅಣ್ಣ ಎಂದರೆ ಸರಿ.

18. ಸಾಕ್ಷಿಗೆ ದಿನಾಂಕ.24.09.2019 ರ ಒಪ್ಪಿಗೆ ಪತ್ರದ ನಕಲು ಪ್ರತಿಯನ್ನು ತೋರಿಸಿ ಅದರಲ್ಲಿ ನನ್ನ ಸಹಿ ಇರುತ್ತದೆ ಎಂಬ ಪ್ರಶ್ನೆಗೆ ಸಾಕ್ಷಿಯು ಅದನ್ನು ನೋಡಿ ಹೌದು ಎಂದು ಉತ್ತರಿಸಿರುತ್ತಾರೆ. ಆದ್ದರಿಂದ ಸದರಿ ಒಪ್ಪಿಗೆ ಪತ್ರವನ್ನು ನಿ.ಡಿ.3 ಎಂದು ಗುರುತಿಸಲಾಯಿತು. ನಿ.ಡಿ.3 ರ ಎರಡು ಪುಟಗಳಲ್ಲಿರುವ ಸಾಕ್ಷಿಯ ಸಹಿಗಳನ್ನು ನಿ.ಡಿ.3(ಎ) ಮತ್ತು 3(ಬಿ) ಎಂದು ಗುರುತಿಸಲಾಯಿತು.

19. ಸಾಕ್ಷಿಗೆ ದಿನಾಂಕ.24.09.2019 ರ ಒಪ್ಪಿಗೆ ಪತ್ರದಲ್ಲಿರುವ ತನ್ನ ಅಣ್ಣ ಮೊಹಮ್ಮದ್ ಸಾಬ್ ತಂದೆ ಗರೀಬ್ ಸಾಬ್ ಇವರ ಸಹಿಯನ್ನು ತೋರಿಸಲಾಗಿ, ಸಾಕ್ಷಿಯು ನೋಡಿ ಗುರುತಿಸಿರುತ್ತಾರೆ. ಸಾಕ್ಷಿಯು ಸದರಿ ದಾಖಲೆಯನ್ನು ಗುರುತಿಸಿದ ಮೇರೆಗೆ ಅದನ್ನು ನಿ.ಡಿ.4 ಎಂದು, ಮೊಹಮ್ಮದ್ ಸಾಬ್ ತಂದೆ ಗರೀಬ್ ಸಾಬ್ ಇವರ ಸಹಿಗಳನ್ನು ನಿ.ಡಿ.4(ಎ) ಮತ್ತು 4(ಬಿ) ಎಂದು ಗುರುತಿಸಲಾಯಿತು.

20. ಸಾಕ್ಷಿಗೆ ದಿನಾಂಕ.24.09.2019 ರ ಒಪ್ಪಿಗೆ ಪತ್ರದಲ್ಲಿರುವ ತನ್ನ ಅಣ್ಣ ಹಯತ್ ಸಾಬ್ ತಂದೆ ಗರೀಬ್ ಸಾಬ್ ಇವರ ಸಹಿಯನ್ನು ತೋರಿಸಲಾಗಿ, ಸಾಕ್ಷಿಯು ನೋಡಿ ಗುರುತಿಸಿರುತ್ತಾರೆ. ಸಾಕ್ಷಿಯು ಸದರಿ ದಾಖಲೆಯನ್ನು ಗುರುತಿಸಿದ ಮೇರೆಗೆ ಅದನ್ನು ನಿ.ಡಿ.5 ಎಂದು, ಹಯತ್ ಸಾಬ್ ತಂದೆ ಗರೀಬ್ ಸಾಬ್ ಇವರ ಸಹಿಗಳನ್ನು ನಿ.ಡಿ.5(ಎ) ಮತ್ತು 5(ಬಿ) ಎಂದು ಗುರುತಿಸಲಾಯಿತು.

21. ನನ್ನ ತಂದೆ ಬಾಲೇನಹಳ್ಳಿ ಗ್ರಾಮದಲ್ಲಿರುವಂತಹ ತನ್ನ ಭಾಗದ ಮನೆಯನ್ನು ನನ್ನ ಚಿಕ್ಕಪ್ಪ 6 ನೇ ಪ್ರತಿವಾದಿ ಹಸನ್ ಸಾಬ್ ಇವರಿಗೆ ದಿನಾಂಕ.02.06.1982 ರಂದು ಮಾರಾಟ ಮಾಡಿದ್ದು, ತದನಂತರ ನನ್ನ ತಂದೆ ತೀರಿಕೊಂಡಿದ್ದರಿಂದ ಹಸನ್ ಸಾಬ್ ಇವರ ಹೆಸರಿಗೆ ಮಾರಾಟ

ಮಾಡಿದ ಮನೆಯನ್ನು ಖಾತೆ ಮಾಡಿಸಲು ನಾನು ಮತ್ತು ನನ್ನ ಇಬ್ಬರು ಸಹೋದರರಾದ 1 ಮತ್ತು 2 ನೇ ವಾದಿಯರು ಅಂದರೆ ಮೊಹಮ್ಮದ್ ಸಾಬ್ ಮತ್ತು ಹಯತ್ ಸಾಬ್ ನಿ.ಡಿ.3 ರಿಂದ 5 ರಂತೆ ಒಪ್ಪಿಗೆ ಪತ್ರಗಳನ್ನು ನೀಡಿರುತ್ತೇವೆ ಎಂದರೆ ಸರಿಯಲ್ಲ. ಸಾಕ್ಷಿಯು ಸೃಷ್ಟಿ ಮಾಡಿಕೊಂಡಿರುತ್ತಾರೆ ಎಂದು ನುಡಿಯುತ್ತಾರೆ. ನಾನು ಮತ್ತು ನನ್ನ ಇಬ್ಬರು ಸಹೋದರರು ಕೊಟ್ಟಂತಹ ಒಪ್ಪಿಗೆ ಪತ್ರಗಳ ಆಧಾರದ ಮೇಲೆ 6 ನೇ ಪ್ರತಿವಾದಿ ಹಸನ್ ಸಾಬ್ ಇವರ ಹೆಸರಿಗೆ ಖಾತೆ ಆಗಿರುತ್ತದೆ ಎಂದರೆ ಸರಿಯಲ್ಲ. 6 ನೇ ಪ್ರತಿವಾದಿ ಹಸನ್ ಸಾಬ್ ಇವರ ಹೆಸರಿಗೆ ಖಾತೆ ಆದ ನಂತರ ಖಾತೆ ಮಾಡಿಸಿಕೊಂಡು ಮನೆಯನ್ನು ರಿಪೇರಿ ಮಾಡಿಸಿ ಹಾಲಿ ಬಾಡಿಗೆಗೆ ನೀಡಿರುತ್ತಾರೆ ಎಂದರೆ ಸರಿಯಲ್ಲ. ನಾವು ಬರೆದುಕೊಟ್ಟಂತಹ ಒಪ್ಪಿಗೆ ಪತ್ರಗಳ ಆಧಾರದ ಮೇಲೆ 6 ನೇ ಪ್ರತಿವಾದಿ ಹಸನ್ ಸಾಬ್ ವಾಸದ ಮನೆಗೆ ಸಂಪೂರ್ಣ ಹಕ್ಕುದಾರರು ಮತ್ತು ಮಾಲೀಕದಾರರಾಗಿರುತ್ತಾರೆ ಎಂದರೆ ಸರಿಯಲ್ಲ. ನನ್ನ ತಂದೆ ಜೀವಂತ ಅವಧಿಯಲ್ಲಿ ತಮ್ಮ ಭಾಗದ ವಾಸದ ಮನೆಯನ್ನು 6 ನೇ ಪ್ರತಿವಾದಿ ಹಸನ್ ಸಾಬ್‌ಗೆ ಮಾರಾಟ ಮಾಡಿರುವುದರಿಂದ ನಾವು ಇಲ್ಲಿಯವರೆಗೆ ಸುಮ್ಮನೆ ಇರುತ್ತೇವೆ ಎಂದರೆ ಸರಿಯಲ್ಲ. ಆದ್ದರಿಂದ ಸದರಿ ಮನೆಯಲ್ಲಿ ಭಾಗ ಬೇಕೆಂದು ಈ ದಾವೆಯಲ್ಲಿ ಸೇರಿಸಿಲ್ಲ ಎಂದರೆ ಸರಿಯಲ್ಲ.

22. ಖಾಸಿಂಸಾಬ್ ತಂದೆ ಸಣ್ಣ ಬುಡೇನ್ ಸಾಬ್ ನನ್ನ ಚಿಕ್ಕಪ್ಪ ಎಂದರೆ ಸರಿ. ಗರೀಬ್ ಸಾಬ್ ತಂದೆ ಸಣ್ಣ ಬುಡೇನ್ ಸಾಬ್ ನನ್ನ ತಂದೆ ಎಂದರೆ ಸರಿ. ನನ್ನ ತಂದೆ ಜೀವಿತ ಕಾಲದಲ್ಲಿ ಸರ್ವೆ ನಂಬರ್ 55/2 ರ ಒಟ್ಟು ಕ್ಷೇತ್ರ 4 ಎಕರೆ 5 ಗುಂಟೆ ಜಮೀನಿನಲ್ಲಿ ತಮ್ಮ ಭಾಗದ ಪಶ್ಚಿಮ ದಿಕ್ಕಿನ 1 ಎಕರೆ 15 ಗುಂಟೆ ಜಮೀನನ್ನು ದಿನಾಂಕ.08.06.1990 ರಂದು 3,000/- ರೂಪಾಯಿಗಳಿಗೆ ನನ್ನ ಚಿಕ್ಕಪ್ಪ ಖಾಸಿಂಸಾಬ್ ರವರಿಗೆ ಮಾರಾಟ ಮಾಡಿ ಹಕ್ಕು ಕ್ರಯದ ಕರಾರು ಪತ್ರ ಬರೆದುಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ.

23. ಸಾಕ್ಷಿಗೆ ದಿನಾಂಕ.08.06.1990 ರ ಕ್ರಯದ ಕರಾರು ಪತ್ರವನ್ನು ತೋರಿಸಿ ಅದರಲ್ಲಿ ನನ್ನ ತಂದೆ ಗರೀಬ್ ಸಾಬ್ ಇವರ ಸಹಿ ಇರುತ್ತದೆ ಎಂದು ತೋರಿಸಲಾಗಿ ಸಾಕ್ಷಿಯು ಅವರಿಗೆ ಸಹಿ ಮಾಡಲು ಬರುತ್ತಿರಲಿಲ್ಲ, ಹೆಬ್ಬೆಟ್ಟು ಹಾಕುತ್ತಿದ್ದರು ಪತ್ರವನ್ನು ಸೃಷ್ಟಿ ಮಾಡಿಕೊಂಡಿದ್ದಾರೆ ಎಂದು ನುಡಿಯುತ್ತಾರೆ. ನಮ್ಮ ಊರಿನಲ್ಲಿ ಮಲ್ಲರೆಡ್ಡಿ ಬಿನ್ ದೊಡ್ಡ ಗೋವಿಂದಪ್ಪ ಮತ್ತು ನರಸಿಂಹರೆಡ್ಡಿ ಬಿನ್ ಕಲಂಓಬಳಪ್ಪ ಎಂಬುವರು ಇದ್ದರು ಎಂದರೆ ಸರಿ. ಮಲ್ಲರೆಡ್ಡಿ ಬಿನ್ ದೊಡ್ಡ ಗೋವಿಂದಪ್ಪ ಮತ್ತು ನರಸಿಂಹರೆಡ್ಡಿ ಬಿನ್ ಕಲಂಓಬಳಪ್ಪ ರವರ ಸಮಕ್ಷಮದಲ್ಲಿ ನನ್ನ ತಂದೆ ಗರೀಬ್ ಸಾಬ್ ತಮ್ಮ ಭಾಗದ ಪಶ್ಚಿಮ ದಿಕ್ಕಿನ 1 ಎಕರೆ 15 ಗುಂಟೆ ಜಮೀನನ್ನು ದಿನಾಂಕ.08.06.1990 ರಂದು

3,000/- ರೂಪಾಯಿಗಳಿಗೆ ನನ್ನ ಚಿಕ್ಕಪ್ಪ ಖಾಸಿಂಸಾಬ್ ರವರಿಗೆ ಮಾರಾಟ ಮಾಡಿ ಹಕ್ಕು ಕ್ರಯದ ಕರಾರು ಪತ್ರ ಬರೆದುಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ.

24. ನಮ್ಮ ಊರಾದ ಬಾಲೇನಹಳ್ಳಿಯಲ್ಲಿ ಚನ್ನಮಲ್ಲಪ್ಪ ಎಂಬ ಪತ್ರ ಬರಹಗಾರರು ಇದ್ದರು ಎಂದರೆ ಸರಿ. ನನ್ನ ತಂದೆ ಪತ್ರ ಬರಹಗಾರರಾದ ಚನ್ನಮಲ್ಲಪ್ಪ ಇವರ ಕಡೆಯಿಂದ ದಿನಾಂಕ.08.06.1990 ರಂದು ಹಕ್ಕು ಕ್ರಯದ ಕರಾರು ಪತ್ರವನ್ನು ಬರೆಸಿರುತ್ತಾರೆ ಎಂದರೆ ಸರಿಯಲ್ಲ.

25. ಸರ್ವೆ ನಂಬರ್ 55/2 ರಲ್ಲಿ ನನ್ನ ತಂದೆಗೆ ಪಶ್ಚಿಮ ಭಾಗದ 1 ಎಕರೆ 15 ಗುಂಟೆ ಜಮೀನು, ನನ್ನ ಚಿಕ್ಕಪ್ಪಂದಿರಾದ ಖಾಸಿಂ ಸಾಬ್ ಹಾಗೂ ಹುಸೇನ್ ಸಾಬ್ ಇವರಿಗೂ ಕೂಡ ತಲಾ 1 ಎಕರೆ 15 ಗುಂಟೆ ಜಮೀನು ಇತ್ತು ಎಂದರೆ ಸರಿ. 1990 ನೇ ಇಸವಿಗಿಂತ ಪೂರ್ವದಲ್ಲಿಯೇ ಬಾಯಿ ಮಾತಿನಿಂದ ಜಮೀನನ್ನು ಹಂಚಿಕೊಂಡು ತಲಾ 1 ಎಕರೆ 15 ಗುಂಟೆಯಂತೆ ವ್ಯವಸಾಯ ಮಾಡಿಕೊಂಡು ಹೋಗುತ್ತಿದ್ದರು ಎಂದರೆ ಸರಿ. ನನ್ನ ತಂದೆ ತನ್ನ ಭಾಗದ 1 ಎಕರೆ 15 ಗುಂಟೆ ಜಮೀನನ್ನು ದಿನಾಂಕ.08.06.1990 ಹಕ್ಕು ಕರಾರು ಪತ್ರದ ಮೂಲಕ ಖಾಸಿಂ ಸಾಬ್ ಇವರಿಗೆ ಮಾರಾಟ ಮಾಡಿರುವುದರಿಂದ ನನ್ನ ತಂದೆಗೆ ಮತ್ತು ನಮಗೆ 1 ಎಕರೆ 15 ಗುಂಟೆ ಜಮೀನಿನಲ್ಲಿ ಹಕ್ಕು, ಅಧಿಕಾರ ಮತ್ತು ಮಾಲೀಕತ್ವ ಇರುವುದಿಲ್ಲ ಎಂದರೆ ಸರಿಯಲ್ಲ.

26. ನನ್ನ ಚಿಕ್ಕಪ್ಪ ಹುಸೇನ್ ಸಾಬ್ ಇವರು ಕೂಡ ತಮ್ಮ ಭಾಗದ 1 ಎಕರೆ 15 ಗುಂಟೆ ಜಮೀನನ್ನು ಖಾಸಿಂ ಸಾಬ್ ಇವರಿಗೆ 5 ಸಾವಿರ ರೂಪಾಯಿಗಳನ್ನು ತೆಗೆದುಕೊಂಡು ಮಾರಾಟ ಮಾಡಿರುತ್ತಾರೆ ಎಂದರೆ ಸರಿಯಲ್ಲ. ನನ್ನ ಚಿಕ್ಕಪ್ಪ ಹುಸೇನ್ ಸಾಬ್ ತಮ್ಮ ಭಾಗದ ಜಮೀನನ್ನು ಮಾರಾಟ ಮಾಡಿರುವುದರಿಂದ ಅವರಿಗೂ ಕೂಡ 1 ಎಕರೆ 15 ಗುಂಟೆ ಜಮೀನಿನಲ್ಲಿ ಯಾವುದೇ ಹಕ್ಕು ಇರುವುದಿಲ್ಲ ಎಂದರೆ ಸರಿಯಲ್ಲ. ನನ್ನ ತಂದೆ ಗರೀಬ್ ಸಾಬ್ ಮತ್ತು ಚಿಕ್ಕಪ್ಪ ಹುಸೇಬ್ ಸಾಬ್ ತಮ್ಮ ಭಾಗದ ಜಮೀನುಗಳನ್ನು ಈಗಾಗಲೇ ಖಾಸಿಂ ಸಾಬ್ ಇವರಿಗೆ ಮಾರಾಟ ಮಾಡಿರುವುದರಿಂದ ಅವರಿಗಾಗಲೀ ಅಥವಾ ಅವರ ಮಕ್ಕಳಾದ ನಮಗಾಗಲೀ ಯಾವುದೇ ಹಕ್ಕು ಇರುವುದಿಲ್ಲ ಎಂದರೆ ಸರಿಯಲ್ಲ. ನನ್ನ ತಂದೆ ಹಾಗೂ ಚಿಕ್ಕಪ್ಪ ಈಗಾಗಲೇ ತಮ್ಮ ಭಾಗದ ಒಟ್ಟು 2 ಎಕರೆ 30 ಗುಂಟೆ ಜಮೀನನ್ನು ಮಾರಾಟ ಮಾಡಿರುವುದರಿಂದ ಖಾಸಿಂ ಸಾಬ್ ಇವರು ತಮ್ಮ 1 ಎಕರೆ 15 ಗುಂಟೆ ಜಮೀನಿಗೆ ಹಾಗೂ ಕ್ರಯಕ್ಕೆ ಪಡೆದ 2 ಎಕರೆ 30 ಗುಂಟೆ ಜಮೀನಿಗೆ ಅಂದರೆ ಒಟ್ಟು ವಿಸ್ತೀರ್ಣ 4 ಎಕರೆ 5 ಗುಂಟೆ ಜಮೀನಿಗೆ ಸಂಪೂರ್ಣ ಮಾಲೀಕರಾಗಿರುತ್ತಾರೆ ಎಂದರೆ ಸರಿಯಲ್ಲ.

27. ಖಾಸಿಂ ಸಾಬ್ ತೀರಿಕೊಂಡ ನಂತರ ಸಂಪೂರ್ಣ 4 ಎಕರೆ 5 ಗುಂಟೆ ಜಮೀನನ್ನು ಅವರ ಮಕ್ಕಳೇ ಅನುಭವಿಸಿಕೊಂಡು ಹೋಗುತ್ತಿದ್ದಾರೆ ಎಂದರೆ ಸರಿಯಲ್ಲ. ಸದರಿ 4 ಎಕರೆ 5 ಗುಂಟೆ ಜಮೀನನ್ನು ಖಾಸಿಂ ಸಾಬ್ ಇವರ ಮಕ್ಕಳಾದ ಹಸನ್ ಸಾಬ್ ಮತ್ತು ಬುಡೇನ್ ಸಾಬ್ ಅಂದರೆ 6 ಮತ್ತು 10 ಪ್ರತಿವಾದಿಯವರು ದಿನಾಂಕ.28.05.2020 ರಂದು ಪಾಲುವಿಭಾಗ ಮಾಡಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಈ ಹಿಂದೆ ನನ್ನ ತಂದೆ ಮತ್ತು ಅವರ ಸಹೋದರರು ಪಾಲುವಿಭಾಗ ಮಾಡಿಕೊಂಡು ನನ್ನ ತಂದೆ ತಮ್ಮ ಭಾಗದ ಜಮೀನನ್ನು ಮಾರಾಟ ಮಾಡಿದ್ದರಿಂದ ಖಾಸಿಂ ಸಾಬ್ ಮಕ್ಕಳು ಕೇವಲ ತಮ್ಮ ಕುಟುಂಬದ ವಂಶವೃಕ್ಷವನ್ನು ಕೊಟ್ಟು ಖಾತೆ ಮಾಡಿಸಿಕೊಂಡಿರುತ್ತಾರೆ ಎಂದರೆ ಸರಿಯಲ್ಲ.

28. ದಿನಾಂಕ.28.05.2020 ರ ಪಾಲುವಿಭಾಗ ಪತ್ರವನ್ನು ನಾನು ಇಲ್ಲಿಯವರೆಗೆ ಪ್ರಶ್ನೆ ಮಾಡಿಲ್ಲ ಎಂದರೆ ಸಾಕ್ಷಿಯು ಅವರು ನನಗೆ ಹೇಳಿಲ್ಲ, ಆದ್ದರಿಂದ ಪ್ರಶ್ನೆ ಮಾಡಿಲ್ಲ, ಪತ್ರವನ್ನು ಸೃಷ್ಟಿ ಮಾಡಿಕೊಂಡಿದ್ದಾರೆ ಎಂದು ನುಡಿಯುತ್ತಾರೆ. ದಿನಾಂಕ.28.05.2020 ರ ಪಾಲುವಿಭಾಗ ಪತ್ರದಂತೆ ಖಾಸಿಂಸಾಬ್ ಮಕ್ಕಳು ತಮ್ಮ ಹೆಸರಿಗೆ ಖಾತೆ ಮಾಡಿಸಿಕೊಂಡಿರುತ್ತಾರೆ ಎಂದರೆ ಸಾಕ್ಷಿಯು ನನಗೆ ಗೊತ್ತಿಲ್ಲದಾಗೆ ಮಾಡಿಕೊಂಡಿರುತ್ತಾರೆ ಎಂದು ನುಡಿಯುತ್ತಾರೆ. ದಿನಾಂಕ.28.05.2020 ರ ಪಾಲುವಿಭಾಗ ಪತ್ರದಂತೆ ಖಾಸಿಂಸಾಬ್ ಮಕ್ಕಳು ಅವರ ಭಾಗಕ್ಕೆ ಬಂದ ಜಮೀನಿಗೆ ಹಕ್ಕುದಾರರು ಮತುತ ಸ್ವಾಧೀನದಾರರಾಗಿರುತ್ತಾರೆ ಎಂದರೆ ಸರಿಯಲ್ಲ.

29. ನನ್ನ ತಂದೆ ಹಾಗೂ ಚಿಕ್ಕಪ್ಪ ಹುಸೇನ್ ಸಾಬ್ ತಮ್ಮ ಭಾಗದ ಜಮೀನುಗಳನ್ನು ಖಾಸಿಂಸಾಬ್‌ಗೆ ಮಾರಾಟ ಮಾಡಿರುವುದರಿಂದ ನನಗೆ ಯಾವುದೇ ಜಮೀನುಗಳು ಉಳಿದುಕೊಂಡಿರಲಿಲ್ಲ ಎಂದರೆ ಸರಿಯಲ್ಲ. ಕೊವಿಡ್ ಸಮಯದಲ್ಲಿ ಖಾಸಿಂಸಾಬ್ ಮಕ್ಕಳು ಸುಳ್ಳು ವಂಶವೃಕ್ಷವನ್ನು ಕೊಟ್ಟು ಖಾತೆ ಮಾಡಿಸಿರುವುದು ನನಗೆ ಗೊತ್ತಾಗಿರುತ್ತದೆ ಎಂದು ನುಡಿಯುತ್ತಾರೆ. ಆ ವಿಚಾರ ಗೊತ್ತಾದ ನಂತರ ನಾನು ನ್ಯಾಯಾಲಯಕ್ಕೆ ಈ ದಾವೆಯನ್ನು ಸಲ್ಲಿಸಿರುತ್ತೇನೆ. ನನ್ನ ತಂದೆ ಹಾಗೂ ಚಿಕ್ಕಪ್ಪ ಹುಸೇನ್ ಸಾಬ್ ತಮ್ಮ ಜೀವಿತ ಕಾಲದಲ್ಲಿ ತಮ್ಮ ಭಾಗದ ಜಮೀನುಗಳನ್ನು ಖಾಸಿಂಸಾಬ್‌ಗೆ ಮಾರಾಟ ಮಾಡಿರುವುದರಿಂದ ಕೇವಲ ತಮ್ಮ ವಂಶವೃಕ್ಷವನ್ನು ಕೊಟ್ಟು ಕಾನೂನು ಬದ್ಧವಾಗಿ ತಮ್ಮ ಹೆಸರಿಗೆ ಖಾತೆ ಮಾಡಿಸಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ನನ್ನ ತಂದೆ ಹಾಗೂ ಚಿಕ್ಕಪ್ಪ ಹುಸೇನ್ ಸಾಬ್ ತಮ್ಮ ಜೀವಿತ ಕಾಲದಲ್ಲಿ ತಮ್ಮ ಭಾಗದ ಜಮೀನುಗಳನ್ನು ಖಾಸಿಂಸಾಬ್‌ಗೆ ಮಾರಾಟ ಮಾಡಿರುವ ವಿಚಾರ ನನಗೆ ಗೊತ್ತಿತ್ತು ಎಂದರೆ ಸರಿಯಲ್ಲ.

ಎಲ್ಲ ವಿಚಾರ ಗೊತ್ತಿದ್ದರಿಂದ 1990 ನೇ ಇಸವಿಯಲ್ಲಿ ಈ ದಾವೆಯನ್ನು ದಾಖಲಿಸುವ ತನಕ ನನ್ನ ತಂದೆ, ಚಿಕ್ಕಪ್ಪ ಮತ್ತು ಅವರ ಮಕ್ಕಳಾದ ನಾವುಗಳು ಇಲ್ಲಿಯವರೆಗೆ ಪ್ರಶ್ನೆ ಮಾಡಿರುವುದಿಲ್ಲ ಎಂದರೆ ಸರಿಯಲ್ಲ.

**(ಪ್ರತಿವಾದಿ ಪರ ವಕೀಲರ ಕೋರಿಕೆಯ ಮೇರೆಗೆ ಮುಂದುವರೆದ ಪಾಟೀ ಸವಾಲನ್ನು ಮುಂದೂಡಲಾಯಿತು)**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿಯಿದೆ,

ಪ್ರಧಾನ ಸಿವಿಲ್ ಮತ್ತು ಜೆ.ಎಂ.ಎಫ್.ಸಿ.,
ನ್ಯಾಯಾಧೀಶರು, ಚಳ್ಳಕೆರೆ.